ನರೇಂದ್ರನಾಥ ಟೀಕಿಸುತ್ತಿದ್ದ. ಒಬ್ಬನ ಹೆಂಡತಿಯಾದ ರಾಧೆ ಇನ್ನೊಬ್ಬನನ್ನು ಪ್ರೀತಿಸುವುದು ಸರಿಯಲ್ಲವೆನ್ನುವುದು ಅವನ ಧೋರಣೆ. ಆಗ ಪರಮಹಂಸರು ರಾಧೆ ದೇವರನ್ನು ಪ್ರೀತಿಸಿದ್ದು ತಪ್ಪಾಗುವುದಿಲ್ಲವೆಂದು ತಿಳಿಯಹೇಳಿದರು. 'ಅಹಂ ಬ್ರಹ್ಮಾಸ್ಮಿ' ಎಂಬ ಅದ್ವೈತ ತತ್ತ್ವವೂ ನರೇಂದ್ರನಿಗೆ ಹಿಡಿಸುತ್ತಿರಲಿಲ್ಲ. ನಾನೇ ದೇವರೆಂದು ಹೇಳುವುದು ಹುಚ್ಚುತನವೆನ್ನುವುದು ಅವನ ವಾದವಾಗಿತ್ತು. ಆಗ ಪರಮಹಂಸರು ನರೇಂದ್ರನನ್ನು ಸ್ಪರ್ಶಿಸಿ ಅದ್ವೈತಾನುಭವ ಆಗುವಂತೆ ಮಾಡಿದರು. ಮುಂದೆ ಹಲವಾರು ದಿನಗಳವರೆಗೆ ಅವನಲ್ಲಿ ಪರಬ್ರಹ್ಮಸ್ವರೂಪದ ಭಾವಪರವಶತೆ ಮುಂದುವರಿಯಿತು. ಸರ್ವವೂ ಬ್ರಹ್ಮಮಯವೆಂದು ಅವನ ಅನುಭವಕ್ಕೆ ಬಂದಿತು. ಈ ರೀತಿಯ ಅದ್ವೈತಾನುಭವದ ವಿಹಂಗಮ ದೃಷ್ಟಿಯಿಂದಾಗಿ ನರೇಂದ್ರನಲ್ಲಿ ಶಾಸ್ತ್ರವಾಕ್ಯಗಳೆಲ್ಲ ಸತ್ಯವೆಂಬ ವಿವೇಕೋದಯವಾಯಿತು.

ಈ ನಡುವೆ ನರೇಂದ್ರನಿಗೆ ಪಿತೃವಿಯೋಗವಾಯಿತು. ತಂದೆ ಮಾಡಿದ ಸಾಲದ ಹೊರೆ, ತಂಗಿ ತಮ್ಮಂದಿರ ಜವಾಬ್ದಾರಿ, ಬಡತನ, ನಿರುದ್ಯೋಗ – ಹೀಗೆ ಕಷ್ಟಗಳ ಪರಂಪರೆಯೇ ಎದುರಾಯಿತು. ಇಂತಹ ಸನ್ನಿವೇಶದಲ್ಲಿ ಒಂದು ದಿನ ನರೇಂದ್ರನಿಗೆ ಹೊಸದೊಂದು ಆಲೋಚನೆ ಬಂತು. ತನ್ನ ಬಡತನ ನಿವಾರಣೆ ಮಾಡೆಂದು ಪರಮಹಂಸರು ಜಗನ್ಮಾತೆಯಲ್ಲಿ ಪ್ರಾರ್ಥನೆ ಸಲ್ಲಿಸುವಂತೆ ಮಾಡಿದರೆ ಹೇಗೆಂಬ ಯೋಚನೆ ಮೂಡಿತು. ದಕ್ಷಿಣೇಶ್ವರಕ್ಕೆ ಬಂದ ಪರಮಹಂಸರಲ್ಲಿ ತನ್ನ ಮನದಿಂಗಿತವನ್ನು ನಿವೇದಿಸಿಕೊಂಡಾಗ ಅವರು, "ಜಗನ್ಮಾತೆ ನನಗೆ ಮಾತ್ರ ತಾಯಿಯಲ್ಲ; ನಿನಗೂ ತಾಯಿಯೇ. ನೀನೇ ಅವಳಲ್ಲಿ ಪ್ರಾರ್ಥಿಸು" ಎಂದುಬಿಟ್ಟರು!

ಆದರೆ ನರೇಂದ್ರನಿಗೆ ಜಗನ್ಮಾತೆಯ ಪ್ರಾರ್ಥನಾಕಾಲದಲ್ಲಿ ತನ್ನ ಬಡತನದ ವಿಚಾರವೇ ಮರೆತೇಹೋಯಿತು. ಮತ್ತೆ ಮತ್ತೆ ಪ್ರಾರ್ಥನೆ ಮಾಡಿದಾಗಲೂ ಭಕ್ತಿ ವೈರಾಗ್ಯಗಳನ್ನು ಪ್ರಾರ್ಥಿಸಿದನೇ ಹೊರತು ಸಂಪತ್ತನ್ನು ಕರುಣಿಸುವಂತೆ ಕೇಳಲು ಅವನಿಗೆ ಮನಸ್ಸಾಗಲೇ ಇಲ್ಲ!

ಶ್ರೀಪರಮಹಂಸರು ನೀಡಿದ ಅಧ್ಯಾತ್ಮ ಬೋಧೆಯಿಂದಾಗಿ ನರೇಂದ್ರನಲ್ಲಿ ಮಹತ್ತರ ಬದಲಾವಣೆಗಳು ಉಂಟಾದವು. ವಿಗ್ರಹವನ್ನು ದೂರುತ್ತಿದ್ದ ನರೇಂದ್ರ ನಿಧಾನವಾಗಿ ವಿಗ್ರಹದಲ್ಲಿ ಜಗನ್ನಿಯಾಮಕ ಚೈತನ್ಯವನ್ನು ಕಾಣಲಾರಂಭಿಸಿದ. ಭಕ್ತಿಗಾನದಲ್ಲಿ ಮೈಮರೆತು ದೇವಿಯ ಎದುರು ಕುಳಿತು ರೋಮಾಂಚನ ಸುಖವನ್ನು ಅನುಭವಿಸತೊಡಗಿದ.

ಶ್ರೀಪರಮಹಂಸರ ಕರಕಮಲದಲ್ಲಿ ಮರ್ತ್ಯದ ಶಿಶುವೊಂದು ಅಮರ್ತ್ಯದ ಆನಂದವನ್ನು ಅನುಭವಿಸಿತು. ಬ್ರಹ್ಮಜ್ಞಾನಿಗಳಾಗಿದ್ದ ಪರಮಹಂಸರು ನೇರವಾಗಿಯೇ ನರೇಂದ್ರನಿಗೆ ಭಗವಂತನ ಸಚ್ಚಿದಾನಂದ ಸುಖವನ್ನು ಅನುಭವಿಸುವಂತೆ ಮಾಡಬಹುದಿತ್ತು. ಆದರೆ ಕ್ಷಣಕಾಲದ ದಿವ್ಯಾನುಭವವು ಅನುಗಾಲದ ಅನುಭೂತಿಯಾಗಿ ನರೇಂದ್ರನಲ್ಲಿ ಸಹಜವಾಗಿ ಅರಳಬೇಕೆಂಬುದು ಅವರ ಅಪೇಕ್ಷೆಯಾಗಿತ್ತು.

ಶ್ರೀಪರಮಹಂಸರು ನರೇಂದ್ರನ ಒಳಹೊರಗನ್ನೆಲ್ಲಾ ವ್ಯಾಪಿಸಿಬಿಟ್ಟಿದ್ದರು. ಅವರ ದಿವ್ಯಬೋಧೆಯಿಂದ ನರೇಂದ್ರನಿಗೆ ಭಾರತೀಯ ಅಧ್ಯಾತ್ಮದ ಸಾರಸರ್ವಸ್ವವೇ ವಶವಾಯಿತು. ಒಮ್ಮೆ ಕನಸಿನಲ್ಲಿ ಪರಮಹಂಸರು ಬಂದು ನರೇಂದ್ರನಿಗೆ ಶ್ರೀಕೃಷ್ಣನ ಪ್ರಿಯಸಖಿ ರಾಧೆಯನ್ನು ತೋರಿಸುತ್ತೇನೆಂದು ಹೇಳಿ ಕರೆದೊಯ್ದು, ತಾವೇ ರಾಧೆಯಾದರು! ಇನ್ನೊಮ್ಮೆ ನರೇಂದ್ರನಿಗೆ, "ನೀನು ಒಂದು ನೊಣವೆಂದು ತಿಳಿದುಕೋ. ಎದುರುಗಡೆ ಸಕ್ಕರೆಯ ಪಾಕವಿದೆ ಎಂದು ಭಾವಿಸು. ನೀನು ಅದರಲ್ಲಿ ಮುಳುಗಬೇಕೆಂದು ಬಯಸುವುದಿಲ್ಲವೇ?" ಎಂದು ಕೇಳಿದರು. ಆಗ ನರೇಂದ್ರ, ಮುಳುಗಿದರೆ ತಾನು ಸತ್ತೇಹೋಗಬಹುದು, ಹಾಗಾಗಿ ಪಾತ್ರೆಯ ಅಂಚಿನಲ್ಲಿ ಕುಳಿತು ಪಾಕವನ್ನು ಸವಿಯುತ್ತೇನೆಂದು, ಬಹಳ ಬುದ್ಧಿವಂತಿಕೆಯಿಂದ ಉತ್ತರಿಸಿದ. ಪರಮಹಂಸರು, "ಸಚ್ಚಿದಾನಂದ ಸಾಗರದಲ್ಲಿ ಮುಳುಗಿದವರು ಅದೇ ಆಗುತ್ತಾರೆ" ಎಂಬ ಅದ್ವೈತರಹಸ್ಯವನ್ನು ಹೇಳಿದರು. ಈ ಉದಾಹರಣೆಗಳಿಂದ ನರೇಂದ್ರನಲ್ಲಿ ವಿಶ್ವವ್ಯಾಪಿ ಸಚ್ಚಿದಾನಂದ ತತ್ತ್ವದ ಸಾಕ್ಷಾತ್ಕಾರವಾಯಿತು.

ಒಮ್ಮೆ ನರೇಂದ್ರನು ಧ್ಯಾನದಲ್ಲಿರುವಾಗ ಹತ್ತಿರದಲ್ಲಿದ್ದ ಸೆಣಬಿನ ಕಾರ್ಖಾನೆಯ ಯಂತ್ರದ ಸದ್ದಿನಿಂದ ಏಕಾಗ್ರತೆಗೆ ಭಂಗವುಂಟಾಯಿತು. ಆಗ "ಶಬ್ದದ ತರಂಗಗಳಲ್ಲೇ ಮನಸ್ಸನ್ನು ಕೇಂದ್ರೀಕರಿಸು" ಎಂದು ಸೂಚಿಸಿದರು. ಪರಮಹಂಸರು ಹೇಳಿಕೊಟ್ಟ ಉಪಾಯದಿಂದ ಗದ್ದಲದ ಮಧ್ಯದಲ್ಲಿಯೂ ಧ್ಯಾನದಲ್ಲಿ ತನ್ಮಯನಾಗುವ ಕೌಶಲ ನರೇಂದ್ರನಿಗೆ ಸಿದ್ಧಿಸಿತು. ಇನ್ನೊಮ್ಮೆ ಪರಮಹಂಸರೊಂದಿಗೆ ಚರ್ಚೆ ನಡೆಸುತ್ತಾ ನರೇಂದ್ರನು ಮೂಢನಂಬಿಕೆ ಮತ್ತು ವಿಚಾರಯುಕ್ತ ನಂಬಿಕೆಗಳ ವಿಶ್ಲೇಷಣೆಯಲ್ಲಿ ತೊಡಗಿದ್ದನು. ಆಗ ಪರಮಹಂಸರು, ನಂಬಿಕೆ ಯಾವಾಗಲೂ ಮೂಢವಾಗಿಯೇ ಇರುವುದೆಂದೂ, ವಿಚಾರಸಹಿತವಾಗಿದ್ದರೆ ಅದು ಜ್ಞಾನವೇ ಆಗಿರುತ್ತದೆಂದೂ ಹೇಳಿ ಅವನ ಕಣ್ಣು ತೆರೆಸಿದರು.

ಜಾತಿ ಮತಗಳನ್ನು ಮೀರಿದ ಮಾನವಪ್ರೀತಿ ನರೇಂದ್ರನಲ್ಲಿ ಮೊಳಕೆಯೊಡೆದ ಒಂದು ಸಂದರ್ಭ ವಿಶೇಷವಾಗಿದೆ. ವೈಷ್ಣವ ಸಂಪ್ರದಾಯವನ್ನು ಕುರಿತು ಉಪನ್ಯಾಸ ನೀಡುತ್ತಾ ಪರಮಹಂಸರು, ಶ್ರೀಹರಿಯ ನಾಮಜಪ, ಜೀವದಯೆ ಮತ್ತು ಮಾನವಸೇವೆಯನ್ನು ಕುರಿತು ಉಲ್ಲೇಖಿಸಿದರು. ಪ್ರತಿಯೊಂದು ಜೀವಿಯಲ್ಲಿಯೂ ಈಶ್ವರನಿರುವಾಗ ದಯೆಯನ್ನು ತೋರಿಸುವೆನೆಂಬುದು ಅಹಂಕಾರದ ಮಾತಾಗುತ್ತದೆ ಎಂದು ಹೇಳಿದರು. ಇದನ್ನು ಕೇಳಿದ ನರೇಂದ್ರನಿಗೆ ಹೊಸ ಬೆಳಕೊಂದು ಗೋಚರಿಸಿದಂತಾಯಿತು. ಮಾನವಸೇವೆಯೇ ದೇವರಪೂಜೆಯೆಂಬ ಹೊಸ ತತ್ತ್ವವು ಅವನಲ್ಲಿ ಸ್ಫುರಿಸಿತು. ದರಿದ್ರನಾರಾಯಣ ಪೂಜೆಯ ಕಲ್ಪನೆಗೆ ಆಗಲೇ ಜೀವಾಂಕುರವಾಯಿತು.

೧೮೮೬ನೇ ಇಸವಿಯ ಆಗಸ್ಟ್ ೧೬ ರಂದು ಶ್ರೀರಾಮಕೃಷ್ಣರು ಮಹಾಸಮಾಧಿಯನ್ನು ಹೊಂದಿದರು. ತಾವು ಯಾವ ಉದ್ದೇಶಕ್ಕಾಗಿ ಭೂಮಿಗೆ ಬಂದಿದ್ದರೋ ಅದು ಆಗಲೇ ಕೈಗೂಡಿತ್ತು. ಮಹಾಸಮಾಧಿಗೆ ನಾಲ್ಕು ದಿನ ಮೊದಲೇ ಅವರು ತಮ್ಮಲ್ಲಿದ್ದ ದಿವ್ಯಶಕ್ತಿಯನ್ನು ನರೇಂದ್ರನಲ್ಲಿ ಆವಾಹಿಸಿಬಿಟ್ಟಿದ್ದರು. "ಇಂದಿನಿಂದ ನಾನು ಫಕೀರನಾದೆ. ನನ್ನಲ್ಲಿರುವ ಸರ್ವಶಕ್ತಿಯನ್ನೂ ನಿನಗೆ ಧಾರೆಯೆರೆದಿದ್ದೇನೆ. ಈ ಶಕ್ತಿಯಿಂದ ಲೋಕದಲ್ಲಿ ಅದ್ಭುತ ಕಾರ್ಯಗಳನ್ನು ಮಾಡಿ ಎಲ್ಲಿಂದ ಬಂದಿರುವೆಯೋ ಅಲ್ಲಿಗೆ ನೀನು ಹಿಂತಿರುಗುವೆ" ಎಂದು ಅಪ್ಪಣೆ ಕೊಡಿಸಿದ್ದರು. ಯಾವ ದೈವೀ

ಶಕ್ತಿಯು ಲೋಕಕ್ಕೆ ಶ್ರೀರಾಮನಾಗಿ ಹಾಗೂ ಶ್ರೀಕೃಷ್ಣನಾಗಿ ಹಿಂದೆ ಅವತರಿಸಿತ್ತೋ, ಅದೇ ಶಕ್ತಿಯು ಶ್ರೀರಾಮಕೃಷ್ಣ ಪರಮಹಂಸರಾಗಿ ಭೂಮಿಗೆ ಬಂದು 'ನರೇಂದ್ರ'ನೆಂಬ ಬಾಲಕನನ್ನು 'ವಿವೇಕಾನಂದ' ರೆಂಬ ವೀರಸಂನ್ಯಾಸಿಯನ್ನಾಗಿ ಮಾಡಿತು. ಭರತಖಂಡ ಮತ್ತು ಜಗತ್ತಿನ ಉದ್ಧಾರಕ್ಕಾಗಿ ಇಳಿದುಬಂದ ದಿವ್ಯತೇಜ ವಿವೇಕಾನಂದರು ಭಕ್ತಿ, ಜ್ಞಾನ, ವೈರಾಗ್ಯಗಳ ತ್ರಿವೇಣಿಸಂಗಮದ ಪರಿಪೂರ್ಣ ವ್ಯಕ್ತಿತ್ವವಾಗಿ ಅರಳಿ ನಿಂತದ್ದು ಪರಮಹಂಸರ ತಪಸ್ಸಿನ ಪ್ರಭಾವದಿಂದಲೇ.

"ಅಮೃತಪುತ್ರರೇ, ಎದ್ದೇಳಿ" ಎಂದು ನಮ್ಮನ್ನು ಎಚ್ಚರಿಸಿದ, ಸಿಂಹದಮರಿಯಂತಿದ್ದ ವಿವೇಕಾನಂದರು, ಭಾರತದ ಪುಣ್ಯಭೂಮಿಯಲ್ಲಿ ಒಂದು ಸಂಕ್ರಮಣಕಾಲದಲ್ಲಿ ಜನಿಸಿದರು. ಅವರನ್ನು ಸಿದ್ಧಗೊಳಿಸುವುದಕ್ಕಾಗಿಯೇ ಎಂಬಂತೆ ಅವರಿಗಿಂತ ಮೊದಲೇ ಶ್ರೀರಾಮಕೃಷ್ಣ ಪರಮಹಂಸರು ಸದ್ಗುರುರೂಪದಲ್ಲಿ ಈ ದೇಶದಲ್ಲಿ ಪ್ರಾದುರ್ಭೂತರಾದರು. ಈ ಈರ್ವರು ಬ್ರಹ್ಮತೇಜಸ್ವಿಗಳಿಂದ ಸನಾತನ ಹಿಂದೂಧರ್ಮವು ಕಾಲುಷ್ಯವನ್ನು ಕಳೆದುಕೊಂಡು ಪುಟಕ್ಕಿಟ್ಟ ಚಿನ್ನವಾಯಿತು. ಪ್ರತಿಯೊಂದು ಜೀವಿಯ ಸೃಷ್ಟಿಯ ಹಿನ್ನೆಲೆಯಲ್ಲಿಯೂ ಅಗೋಚರವಾದ ವಿರಾಟ್ ಮನಸ್ಸೊಂದು ಕೆಲಸ ಮಾಡುತ್ತದೆ ಎಂಬುದನ್ನು ತಿಳಿದಾಗ ನಮ್ಮೆಲ್ಲರ ಮನಸ್ಸು ಪುಳಕಿತವಾಗುತ್ತದೆ. ಗುರುಶಿಷ್ಯರಾಗಿ ಪರಸ್ಪರ ಪ್ರೀತಿಸುತ್ತಾ ಮನುಕುಲದ ಏಳಿಗೆಗಾಗಿ ಸದಾ ಚಿಂತಿಸಿದ ಈ ಈರ್ವರು ಮಹಾಪುರುಷರನ್ನು ಸ್ಮರಿಸುವುದರಿಂದ ನಮ್ಮ ಜೀವನ ಪರಮಪಾವನವಾಗುವುದರಲ್ಲಿ ಸಂದೇಹವಿಲ್ಲ.

**ಸ್ವಾಮಿ ವಿವೇಕಾನಂದರ ಸ್ಫೂರ್ತಿ ಮತ್ತು ಪ್ರಭಾವ – ಅನುಭವ ಕಥನ**

## ಆನಂದದ ಬದುಕು ನನ್ನದಾಯಿತು!

ಮೊದಲಿನಿಂದಲೂ ಸಂಗೀತ ಸಾಹಿತ್ಯ ಇತ್ಯಾದಿ ವಿವಿಧ ಕಲೆಗಳಲ್ಲಿ ಆಸಕ್ತಿಯಿರುವ ನನಗೆ, ಗೃಹಿಣಿಯಾದ ಮೇಲೆ ಸಾಧನೆ ಮುಂದುವರಿಸುವ ಚೈತನ್ಯ ಇರಲಿಲ್ಲ. ಮನಸ್ಸಿನ ಒಂದು ಮೂಲೆಯಲ್ಲಿ ಆನಂದದ ಕೊರತೆ ಅನುಭವಿಸುತ್ತಿದ್ದೆ. ಬದುಕು ಇಷ್ಟೆ ಎನ್ನುವ ಭಾವನೆ ಹಗಲೂ ರಾತ್ರಿ ಕಾಡುತ್ತಿತ್ತು. ಆ ಸಂದರ್ಭದಲ್ಲಿ ನನ್ನ ಸುಕೃತದ ಫಲವಾಗಿ ಶ್ರೀರಾಮಕೃಷ್ಣ ಆಶ್ರಮದ ಸಂಪರ್ಕ ದೊರೆತು, ಸ್ವಾಮಿ ರಂಗನಾಥಾನಂದಜಿ ಮಹಾರಾಜ್‌ರವರಿಂದ ಮಂತ್ರದೀಕ್ಷೆಯ ಭಾಗ್ಯ ದೊರೆಯಿತು. ಸ್ವಾಮಿ ವಿವೇಕಾನಂದರ ಜೀವನ, ಸಾಧನೆ, ಸಂದೇಶಗಳ ಕುರಿತಾದ ಕೃತಿಗಳನ್ನು ಅಧ್ಯಯನ ಮಾಡುತ್ತಾ, ಅವರ ಜೀವನದಲ್ಲಿ ನಡೆದ ಘಟನೆಗಳ ವಸ್ತುಸ್ಥಿತಿಯನ್ನು ಅರಿತಾಗ ನನಗೆ ಅಪಾರ ಸ್ಫೂರ್ತಿ ದೊರೆಯಿತು. ಕಾಲೇಜು ಶಿಕ್ಷಣ ಮುಗಿದ ಮೇಲೆ ಕಿತ್ತು ತಿನ್ನುವ ಬಡತನ, ಅದನ್ನು ಅವರು ನಿಭಾಯಿಸಿರುವ ರೀತಿ ಮತ್ತು ಶ್ರೀರಾಮಕೃಷ್ಣರ ಸಂಪರ್ಕ ದೊರೆತು "ದೇವರನ್ನು ನೋಡಿದ್ದೀರಾ?" ಎಂಬ ಪ್ರಶ್ನೆಗೆ ಉತ್ತರ ಕಂಡುಕೊಂಡ ರೀತಿ – ಇವೆಲ್ಲವೂ ನನ್ನ ಜೀವನಕ್ಕೆ ಒಂದು ರೀತಿಯಲ್ಲಿ ಧೈರ್ಯ, ಉತ್ಸಾಹವನ್ನು ತುಂಬಿತು. "ಸಿಹಿಯ ಅನುಭವದಿಂದ ಜೀವನದಲ್ಲಿ ಯಾವ ಪಾಠವನ್ನೂ ಕಲಿಯಲು ಸಾಧ್ಯವಿಲ್ಲ. ಕಹಿಯ ಅನುಭವದಿಂದ ಮಾತ್ರ ಪಾಠವನ್ನು ಕಲಿಯಲು ಸಾಧ್ಯ" – ಅವರ ಈ ಸಂದೇಶ ಹಿಂದಿನ ಘಟನೆಗಳನ್ನು ಮೆಲುಕು ಹಾಕುತ್ತಾ ಸಮಯ ವ್ಯರ್ಥಮಾಡದೆ, ಅವೆಲ್ಲವೂ ಭಗವಂತ ಕೊಟ್ಟಿದ್ದ ಜೀವನಪರೀಕ್ಷೆ ಎಂದು ತಿಳಿದು ಮುನ್ನುಗ್ಗಬೇಕು ಎನ್ನುವ ಸ್ಫೂರ್ತಿಯನ್ನು ನನ್ನಲ್ಲಿ ಉಂಟುಮಾಡಿತು. ನಾಳೆ ಮಾಡುವ ಕೆಲಸವನ್ನು ಇಂದು, ಇಂದು ಮಾಡುವ ಕೆಲಸವನ್ನು ಈಗ, ಈಗ ಮಾಡುವ ಕೆಲಸವನ್ನು ಈ ಕ್ಷಣದಲ್ಲಿ ಮಾಡುವ ಚೈತನ್ಯ ಮೂಡಿತು. ಸ್ವಾಮಿ ವಿವೇಕಾನಂದರ ನಾಲ್ಕು ಯೋಗಗಳ ಕುರಿತಾದ ವಿಚಾರಗಳು ನನ್ನಲ್ಲಿ ಪ್ರಭಾವ ಬೀರಿತು. ಅವರು ಹೇಳುವಂತೆ, "ಯಾವಾಗಲೂ ಒಳ್ಳೆಯದನ್ನು ಮಾಡಬೇಕು, ನಿರಂತರವಾಗಿ ಸದ್ವಿಚಾರವನ್ನೇ ಆಲೋಚಿಸುತ್ತ, ದುಷ್ಟ ಸಂಸ್ಕಾರಗಳನ್ನು ನಿಗ್ರಹಿಸಬೇಕು." ಈ ಬಗೆಯ ವಿಚಾರಗಳನ್ನು ನನ್ನ ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೆ ಅವರೇ ಆದರ್ಶಪ್ರಾಯರಾದರು. ಸ್ವಾಮಿ ವಿವೇಕಾನಂದರು ಮತ್ತು ರಾಜಾ ಮಂಗಲ್ ಸಿಂಗ್ ನಡುವೆ ವಿಗ್ರಹಾರಾಧನೆ ಕುರಿತು ನಡೆದ ಸಂಭಾಷಣೆ ನನ್ನಲ್ಲಿ ಅಲ್ಪಸ್ವಲ್ಪ ಇದ್ದ ನಾಸ್ತಿಕ ಭಾವವನ್ನೂ ದೂರಮಾಡಿತು.

ಶಿಕಾಗೋ ನಗರದಲ್ಲಿ ಸ್ವಾಮಿ ವಿವೇಕಾನಂದರನ್ನು, ದೊಡ್ಡ ಶ್ರೀಮಂತನಾದ ರಾಕ್‌ಫೆಲರ್ ಭೇಟಿಯಾದ. ಆಗ ಅವರು ಅವನನ್ನು ಕತ್ತು ಎತ್ತಿಯೂ ನೋಡದೆ ಅವನ ಜೀವನದ ಹಲವಾರು ವಿಷಯಗಳನ್ನು ಹೇಳಿದರು. "ನೀನು ಸಂಪಾದನೆ ಮಾಡುತ್ತಿರುವ ಹಣ ನಿಜವಾಗಿ ನಿನಗೆ ಸೇರಿದ್ದಲ್ಲ, ನೀನು ಕೇವಲ ಒಂದು ಮಧ್ಯವರ್ತಿ. ನಿನ್ನಲ್ಲಿರುವ ಹಣದಿಂದ ಪ್ರಪಂಚಕ್ಕೆ ಒಳ್ಳೆಯದನ್ನು ಮಾಡಬೇಕು. ಜನರಿಗೆ ಒಳ್ಳೆಯದನ್ನು ಮಾಡುವುದಕ್ಕೆ ನಿನಗೆ ಒಂದು ಅವಕಾಶ ಸಿಕ್ಕಲಿ ಎಂದು ದೇವರು ಐಶ್ವರ್ಯವನ್ನು ಕೊಟ್ಟಿರುವನು" ಎಂದು ನುಡಿದರು. ರಾಕ್‌ಫೆಲರ್‌ಗೆ ಇದರಿಂದ ಕೋಪ ಬಂದಿತು. ಒಂದು ವಾರವಾದ ಮೇಲೆ ಪುನಃ ಬಂದು, ದೊಡ್ಡ ಸಾರ್ವಜನಿಕ ಸಂಸ್ಥೆಗೆ ಕೊಡಮಾಡಿದ ದಾನಪತ್ರವನ್ನು ತೋರಿಸಿದನು; "ನೀವು ನನಗೆ ಧನ್ಯವಾದವನ್ನು ಅರ್ಪಿಸಬೇಕು" ಎಂದನು. ಅದಕ್ಕೆ ಸ್ವಾಮೀಜಿ, " ಈ ಅವಕಾಶವನ್ನು ನಿನಗೆ ಒದಗಿಸಿದ್ದಕ್ಕಾಗಿ ನೀನೇ ನನಗೆ ಧನ್ಯವಾದಗಳನ್ನು ಹೇಳಬೇಕು" ಎಂದರು. ಸ್ವಾಮೀಜಿಯವರ ನೇರ, ಕಠೋರ, ಸತ್ಯ ನುಡಿಗಳು ರಾಕ್‌ಫೆಲರ್‌ನ ಅಹಂಕಾರವನ್ನು ನುಚ್ಚುನೂರಾಗಿ ಮಾಡಿದವು. ತ್ಯಾಗ ಮತ್ತು ಸೇವೆಗೆ ಈ ಘಟನೆ ಪ್ರೇರೇಪಿಸುತ್ತದೆ. ಇದನ್ನು ಓದಿದಾಗ ನನಗೂ ಸಹ ತುಂಬ ಸ್ಫೂರ್ತಿ ಬಂತು.

ವೃತ್ತಿಯಲ್ಲಿ ಉಪನ್ಯಾಸಕಿಯಾಗಿ ಗೊಣಗದೆ ವೃತ್ತಿಯನ್ನು ಪವಿತ್ರವೆಂದು ತಿಳಿದು, ಪ್ರೀತಿಸಿ ಸೇವೆಯನ್ನು ಆನಂದವಾಗಿ ಸಲ್ಲಿಸುತ್ತಾ ಬಂದಿದ್ದೇನೆ. ವಿದ್ಯಾರ್ಥಿಗಳಿಗೆ ಪಠ್ಯೇತರ ಚಟುವಟಿಕೆಗಳಾದ ಯೋಗ, ಪ್ರಾಣಾಯಾಮ, ದೇವರ ನಾಮ, ದೇಶಭಕ್ತಿ ಗೀತೆ, ವ್ಯಕ್ತಿತ್ವ ವಿಕಸನ ಕುರಿತಾದ ಮಾರ್ಗದರ್ಶನ – ಇವುಗಳನ್ನೂ ನಡೆಸಿಕೊಂಡು ಬರುತ್ತಿದ್ದೇನೆ. ಯಾವ ಕೆಲಸಕ್ಕೂ ಸಮಯವೇ ಇಲ್ಲ ಎಂದು ಹೇಳುತ್ತಿದ್ದ ನಾನು, ಈಗ ಸಮಯ ಮಾಡಿಕೊಂಡು ಸತ್ಸಂಗದಲ್ಲಿ ಪಾಲ್ಗೊಳ್ಳುವುದು, ಸತ್ಸಂಗ ನಡೆಸುವುದು, ಉಚಿತವಾಗಿ ಯೋಗ ತರಬೇತಿ ನೀಡುವುದು ಮೊದಲಾದ ಸೇವೆಯಲ್ಲಿ ತೊಡಗಿಸಿಕೊಂಡು, ಸಮಾಜಕ್ಕೆ ನನ್ನ ಕೈಲಾದಷ್ಟು ಅಲ್ಪಸ್ವಲ್ಪ ಕೊಡುಗೆ ನೀಡುತ್ತಿದ್ದೇನೆ. ಅದಮ್ಯ ಚೈತನ್ಯ, ಧೈರ್ಯ, ಸಕಾರಾತ್ಮಕ ಮನೋಭಾವನೆ, ಒಳ್ಳೆಯ ಚಿಂತನೆ, ಪ್ರಾಮಾಣಿಕತನ ಇವುಗಳೊಂದಿಗೆ ನಾನು ಆನಂದವಾಗಿದ್ದೇನೆ. ಹೀಗೆ ನಾನು ಎಲ್ಲರನ್ನೂ ಪ್ರೀತಿಸುತ್ತಾ, ಎಲ್ಲರೊಡನೆಯೂ ನಗುತ್ತಾ ಸಹಬಾಳ್ವೆ ನಡೆಸುವಂತಹ ಸಮಗ್ರ ಬದಲಾವಣೆಯ ಜೀವನ ನಡೆಸುತ್ತಿರುವುದು ಸ್ವಾಮಿ ವಿವೇಕಾನಂದರು ನನ್ನ ಮೇಲೆ ಬೀರಿದ ಪ್ರಭಾವದಿಂದಲೇ.

– ಶ್ರೀಮತಿ ವಿಲಾಸಿನಿ ಭಟ್ಟ, ಹೊಸಕೋಟೆ

# “ಓ ನನ್ನ ಭಾರತ”

## ಸ್ವಾಮಿ ವಿವೇಕಾನಂದರ ದೇಶಭಕ್ತಿ

ಶಾಮರಾವ್ ಎಸ್.ಎ.

**ಆಧ್ಯಾತ್ಮಿಕ ಸಾಮ್ರಾಟರಾಗಿರುವ ಸ್ವಾಮಿ ವಿವೇಕಾನಂದರಲ್ಲಿ ದೇಶಭಕ್ತಿಯ ಕಾವು ಹುಟ್ಟಿ ಪ್ರಜ್ವಲವಾಗಿದ್ದು ಹೇಗೆ? ಪಾರಮಾರ್ಥದ ಸವಿಯನ್ನು ಉಂಡ ಈ ಮಹಾನ್ ಋಷಿಯು, ತನ್ನ ನಾಡವರ ಕಷ್ಟಕಾರ್ಪಣ್ಯಗಳ ಕಡೆಗೆ ದೃಷ್ಟಿ ಹರಿಸಿದ್ದಾದರೂ ಹೇಗೆ? ಭಾರತದ ಸರ್ವತೋಮುಖ ಅಭಿವೃದ್ಧಿಗೆ ಅವರು ನೀಡಿದ ಸಲಹೆ ಸೂಚನೆ ಸಂದೇಶಗಳು ಇಂದಿಗೂ ಹೇಗೆ ಪ್ರಸ್ತುತ? – ಈ ಹತ್ತು ಹಲವು ಪ್ರಶ್ನೆಗಳಿಗೆ ಮನೋಜ್ಞ ಉತ್ತರಗಳನ್ನು ಈ ಲೇಖನದಿಂದ ಪಡೆಯಬಹುದು. ನೀರಾವರಿ ಇಲಾಖೆಯ ನಿವೃತ್ತ ಅಧೀಕ್ಷಕರಾದ ಲೇಖಕರು ಉತ್ತಮ ಬರಹಗಾರರು; ರಾಮಕೃಷ್ಣ ಆಶ್ರಮದ ಭಕ್ತರು.**




ಸ್ವಾಮಿ ವಿವೇಕಾನಂದರು ಬಾಲ್ಯದಿಂದಲೇ ಆತ್ಮವಿಶ್ವಾಸ, ಧೈರ್ಯ, ಸ್ವತಂತ್ರ ಪ್ರವೃತ್ತಿ, ಸ್ವಾಭಿಮಾನ ಮತ್ತು ಸ್ವಾವಲಂಬನೆಯ ಮನೋಭಾವದವರು. ಅಷ್ಟೇ ಅಲ್ಲ, ಅವರ ಸಂಪರ್ಕಕ್ಕೆ ಬಂದರೆ ಸಾಕು, ಬೇರೆಯವರಿಗೂ ಸಹಜವಾಗಿಯೇ ಈ ಸರ್ವಗುಣಗಳ ಸೋಂಕು ತಗಲುತ್ತಿತ್ತು!

ಪರಮ ಸಾಧ್ವಿ ಶ್ರೀಮತಿ ಭುವನೇಶ್ವರಿದೇವಿ ಮತ್ತು ಸತ್ಯ ಪ್ರಾಮಾಣಿಕತೆಯ ಸಾಕಾರಮೂರ್ತಿಯಂತಿದ್ದ ವಕೀಲರಾದ ವಿಶ್ವನಾಥದತ್ತ ದಂಪತಿಗಳ ಸುಪುತ್ರರೇ ಮುಂದೆ ಸ್ವಾಮಿ ವಿವೇಕಾನಂದರೆಂದು ಹೆಸರಾದ ನರೇಂದ್ರನಾಥ ದತ್ತ. ಸದ್ವಿವೇಕ ಸಂಸಾರದ ವಾತಾವರಣ ಈ ಬಾಲಕನ ಭಗವತ್ಸಾಕ್ಷಾತ್ಕಾರದ ಹಂಬಲದ ಸಸಿಗೆ ಫಲವತ್ತಾದ ಕ್ಷೇತ್ರವಾಗಿತ್ತು. ಬಾಲ್ಯದ ಭಗವತ್ಸಾಕ್ಷಾತ್ಕರದ ಹಂಬಲ ದಿನೇದಿನೇ ತೀವ್ರತರವಾಗುತ್ತಿತ್ತು. ಇದರಿಂದಾಗಿ, ಅವರು ಸೂಕ್ತ ಗುರುವಿಗಾಗಿ ಅರಸುತ್ತಿದ್ದರು. ಅರಸುತ್ತ ಹೊರಟ ಬಾಲಕನಿಗೆ ದೊರಕಿದ ಸಮರ್ಥಗುರು ಶ್ರೀರಾಮಕೃಷ್ಣ ಪರಮಹಂಸರು. ಶ್ರೀರಾಮಕೃಷ್ಣರ ಪದತಲದಲ್ಲಿ ಕುಳಿತು ಸಾಧನಾನಿರತರಾಗಿ. ಶ್ರದ್ಧೆ–ನಿಷ್ಠೆ ಸಾಧನದ್ವಾರ ಅಲ್ಪಕಾಲದಲ್ಲೇ ಸಿದ್ಧೇಶ್ವರರಾದರು. ಶ್ರೀರಾಮಕೃಷ್ಣರ ನಿರ್ಯಾಣದ ತರುಣದಲ್ಲೇ ಸಂನ್ಯಾಸಾಶ್ರಮ ಸ್ವೀಕರಿಸಿದರು. ಸನಾತನಧರ್ಮದ ಪ್ರಸಾರದೊಂದಿಗೆ ಜಗತ್ತಿನಾದ್ಯಂತ ಜಾಗೃತಿ ಮೂಡಿಸಲು ದೇಶವಿದೇಶಗಳನ್ನು ಸುತ್ತಿದರು. ತ್ಯಾಗವೈರಾಗ್ಯದಿಂದ ತುಂಬಿತುಳುಕುತ್ತಿದ್ದ ಈ ತರುಣಸಂನ್ಯಾಸಿ ಅಪಾರ ಶಿಷ್ಯಸಂಪತ್ತನ್ನು ಗಳಿಸಿದರು – ಅಂಥವರಲ್ಲಿ ತ್ಯಾಗ ವೈರಾಗ್ಯಸಂಪನ್ನ ಯುವಯತಿಗಳಿದ್ದರು, ಗೃಹೀಭಕ್ತರಿದ್ದರು, ಅಭಿಮಾನವೃಂದವಿತ್ತು. ಇವರೆಲ್ಲರನ್ನೂ ಕೂಡಿಸಿಕೊಂಡು ‘ಶ್ರೀರಾಮಕೃಷ್ಣ ಮಹಾಸಂಘ’ವನ್ನು ಹುಟ್ಟು ಹಾಕಿದರು. ಹೀಗೆ ಆಧ್ಯಾತ್ಮಿಕ ಸಾರ್ವಭೌಮರಾಗಿದ್ದವರು, ಅಸೀಮ ರಾಷ್ಟ್ರಾಭಿಮಾನವನ್ನು ಹೊಂದಿದ್ದಾದರೂ ಹೇಗೆ ? ಪರಕೀಯ ಆಡಳಿತದಲ್ಲಿ ನಲುಗಿ ನಿತ್ರಾಣರಾಗಿ ಮಲಗಿದ್ದ, ಜೀವಚ್ಛವದಂತಿದ್ದ ಜನಸಮೂಹ ನಿಬ್ಬೆರಗಾಗಿ ಏಳುವಂತೆ ಜಾಗೃತಿಯ ಜಾಗಟೆ ಬಾರಿಸಿ, ನಮ್ಮ ನಾಡವರಲ್ಲಿ ದೇಶಭಕ್ತಿಯ ರಕ್ತವು ಕುದಿಯುವಂತೆ ಮಾಡಿದ್ದು ಹೇಗೆ?

ಸ್ವಾಮೀಜಿಯವರು ಹುಟ್ಟಿದ್ದು ೧೮೬೩ ನೇ ಇಸವಿಯಲ್ಲಿ. ಬ್ರಿಟಿಷರು ‘ಸಿಪಾಯಿದಂಗೆ’ ಎಂದು ಕರೆಯುತ್ತಿದ್ದ ಭಾರತದ ಮೊದಲ ಸ್ವಾತಂತ್ರ್ಯ ಸಂಗ್ರಾಮ ಜರುಗಿದ್ದು ೧೮೫೭ ರಲ್ಲಿ. ಈ ಸಂಗ್ರಾಮವೇನೂ ಆಗ ಸಫಲವಾಗಲಿಲ್ಲ. ಸ್ವಾಮೀಜಿಯುವರು ಹುಟ್ಟಿದಾಗ ಆ ಸಂಗ್ರಾಮ ನಡೆದು ಕೇವಲ ಏಳು ವರ್ಷವಾಗಿತ್ತಷ್ಟೆ. ಇನ್ನೂ ದೇಶದಲ್ಲಿ, ಅದರಲ್ಲೂ ಉತ್ತರಭಾರತದಲ್ಲಿ, ಆ ಆಂದೋಲನದ ಕಾವು ಅಲ್ಲಿನ ವಾಯುವನ್ನು ತಂಪಾಗಿರಲು ಬಿಟ್ಟಿರಲಿಲ್ಲ! ಈ ಬಿಸಿಯುಸಿರನ್ನು ಹೀರಿಕೊಂಡೇ ಸ್ವಾಮೀಜಿಯವರು ಬೆಳೆಯುತ್ತಿದ್ದರು. ಈಗಾಗಲೆ ಭಾರತ ಸುಮಾರು ಸಾವಿರ ವರ್ಷ ಕಾಲ ಪರಕೀಯರ ಆಡಳಿತನೊಗದಡಿಯಲ್ಲಿ ನಜ್ಜುಗುಜ್ಜಾಗಿತ್ತು. ಮೊದಲು ವಿವಿಧೆಡೆಯಿಂದ ನುಗ್ಗಿಬಂದ ಮುಸಲ್ಮಾನರ ದಾಳಿ, ದಬ್ಬಾಳಿಕೆ, ದುರಾಡಳಿತ; ಅನಂತರ ಯೂರೋಪಿನ ಕೆಲ ರಾಷ್ಟ್ರಗಳ, ಅದರಲ್ಲೂ ಬಹುವಾಗಿ ಬ್ರಿಟಿಷರ, ನಯವಂಚಕತನದ ಆಡಳಿತ; ತನ್ನಿಮಿತ್ತ ಜನತೆಗೆ ಮಾದಕದ್ರವ್ಯ ಮೆದ್ದಿರುವಂಥ ಮೈಮರೆವು. ಭಾರತಾದ್ಯಂತ ರಾಜಮಹಾರಾಜರುಗಳೆಲ್ಲ ಪರಸ್ಪರ ದ್ವೇಷಾಸೂಯೆಗಳಲ್ಲಿಯೇ ಮುಳುಗಿದ್ದರು. ಇವರುಗಳಲ್ಲಿ ಒಗ್ಗಟ್ಟಿನ ಕೊರತೆ ಎದ್ದುಕಾಣುತ್ತಿತ್ತು. ಇದರಿಂದ ಇಡೀ ಭಾರತವೇ ಕುರುಕ್ಷೇತ್ರ

ಮಯವಾಗಿತ್ತು. ಜನಸಾಮಾನ್ಯರಂತೂ ಅಜ್ಞಾನ, ಅವಿದ್ಯೆ, ಬಡತನಗಳಿಂದ ಬಳಲಿ, ಜಡತ್ವ ಇಲ್ಲಿ ಬೇರೂರಿತ್ತು.

ಇಂಥ ವಿಪ್ಲವ – ವಿಷಮಯ ವಾತಾವರಣದ ಮಧ್ಯೆ, ಕತ್ತಲೆಯ ಕಾರ್ಮೋಡ ಕವಿದಿದ್ದ ಕಾಲದಲ್ಲಿ, ಭರವಸೆಯ ಬೆಳಕನ್ನು ಬೀರಲು ಬಂದವರೇ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ, ಸ್ವಾಮಿ ವಿವೇಕಾನಂದರೆಂಬ ದಿವ್ಯತ್ರಯರು. ಮೂಲಮೂರ್ತಿಯಾಗಿ ಶ್ರೀರಾಮಕೃಷ್ಣರು ತಮ್ಮ ಅನುಭಾವದ ಗರಡಿಯಲ್ಲಿ ತ್ಯಾಗವೈರಾಗ್ಯ ನಿಧಿಗಳಾದ ಯುವಕರ ತಂಡವನ್ನು ರೂಪಿಸಿದರು. ಈ ಉತ್ಸಾಹಿ ಯುವವೃಂದಕ್ಕೆ ಮಹಾತಾಯಿಯಾಗಿ ಆಸರೆ, ಪೋಷಣೆ ಕೊಟ್ಟು, ತನ್ಮೂಲಕ ವನಸುಮದಂತೆ ಅಧ್ಯಾತ್ಮದ ಶ್ರೀಗಂಧದೊಡನೆ ತಂಬೆಲರನ್ನು ಎಲ್ಲೆಡೆ ಶ್ರೀಮಾತೆ ಶಾರದಾದೇವಿಯವರು ಹರಡಿದರು. ಸ್ವಾಮಿ ವಿವೇಕಾನಂದರಾದರೋ, ಉತ್ಸವಮೂರ್ತಿಯಾಗಿ ತೇಜೋ ಸೂರ್ಯನಂತೆ ದೇಶಾದ್ಯಂತ, ವಿಶ್ವಾದ್ಯಂತ ಸಚ್ಚಿದಾನಂದದ ಜ್ಞಾನಾಮೃತವನ್ನು ಧಾರೆಯೆರೆದರು.



ಸ್ವಾಮೀಜಿ ಸಾಮಾನ್ಯ ಸಂನ್ಯಾಸಿಯಂತೆ ತಾವು ಕೈಗೊಂಡ ದೇಶದ ಉದ್ದಗಲದ ಅಲೆದಾಟದಲ್ಲಿ ಭಾರತದ ದೀನಹೀನ ಪರಿಸ್ಥಿತಿಯನ್ನು ಕಣ್ಣಾರೆಕಂಡರು. ಹಸಿದ ಹೊಟ್ಟೆಗೆ ವೇದಾಂತವನ್ನು ಹೇಳುವುದು ತರವಲ್ಲವೆಂದು ಸ್ಪಷ್ಟವಾಗಿ ಮನಗಂಡರು. ಶ್ರೀರಾಮಕೃಷ್ಣರು ದಕ್ಷಿಣೇಶ್ವರ ಗುಡಿಯ ಮೂಲೆಯೊಂದರಲ್ಲಿ ಕುಳಿತಿದ್ದರೂ, ಈ ದೇಶದ (ಅಂತೆಯೆ ಜಗತ್ತಿನ) ಜನರ ನಾಡಿಮಿಡಿತ ಬಲ್ಲವರಾಗಿದ್ದರು. ಮಹಾನುಭಾವರಾದ ಅವರು ಒಂದು ದಿನ ಭಾವಾವೇಶದಲ್ಲಿ 'ಜೀವಸೇವೆಯಿಂದ ಶಿವಸೇವೆ' ಯೆಂಬ ಸತ್ವಯುತ ವಾಕ್ಕಿನಿಂದ ಸ್ವಾಮೀಜಿಯವರಿಗೆ ವ್ರತದೀಕ್ಷೆ ಕೊಟ್ಟರೆಂದೇ ಹೇಳಬಹುದು. ಅವಕಾಶ ದೊರೆತರೆ ಇದನ್ನು ಇಡೀ ಜಗತ್ತಿನೆಲ್ಲೆಡೆ ಸಾರುತ್ತೇನೆಂದು ಅಂದೇ ವಿವೇಕಾನಂದರು ಪಣತೊಟ್ಟರು. ಗುರುಭಾಯಿಗಳೊಡನೆ ಮಾತನಾಡುವಾಗ ಈ ಸಂಕಲ್ಪವನ್ನು ಹೊರಗೆಡವಿಯೂ ಇದ್ದರು. ತಮ್ಮ ನಾಡಿನ ಕೋಟಿಕೋಟಿ ಬಡಜನತೆಯ ಉದ್ಧಾರದ ಬಗ್ಗೆ ಸ್ವಾಮೀಜಿ ಗಂಭೀರ ಚಿಂತನೆ ನಡೆಸಿದರು. ಇದಕ್ಕೆ ಮೂಲಭೂತವಾಗಿ ಸ್ವತಂತ್ರ ವಾತಾವರಣ ಇರಬೇಕಾದ ಅನಿವಾರ್ಯತೆ ಅವರಿಗೆ ಮನವರಿಕೆಯಾಗಿತ್ತು. ಸ್ವಾಮೀಜಿಯವರು ತಮ್ಮ ಎಫ್. ಎ. ಪರೀಕ್ಷೆ ಮುಗಿಯುವ ಹೊತ್ತಿಗೆ (೧೮೮೧), ಧಾರ್ಮಿಕ ತತ್ತ್ವಶಾಸ್ತ್ರ ಗ್ರಂಥಗಳಲ್ಲದೆ, ವಿಜ್ಞಾನದ ವಿವಿಧಶಾಖೆಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದರು. ಇವುಗಳೊಂದಿಗೆ, ಅವರಿಗೆ ತುಂಬಾ ಪ್ರಿಯವಾದ ಸಂಗತಿಯೆಂದರೆ ಇತಿಹಾಸದ ವ್ಯಾಸಂಗ. ಭಾರತದ ಹಾಗೂ ಜಗತ್ತಿನ ಇತಿಹಾಸವನ್ನು ಆಮೂಲಾಗ್ರವಾಗಿ ಓದಿ ಇತಿಹಾಸದ ಘಟನೆಗಳೆಲ್ಲವನ್ನೂ ಅವರು ಕರತಲಾಮಲಕ ಮಾಡಿಕೊಂಡರು. ಜೊತೆಗೆ ಇವೆಲ್ಲವನ್ನೂ ಕಣ್ಣಿಗೆ ಕಟ್ಟುವಂತೆ ವಿವರಿಸುವ ಕಲೆಯೂ ಅವರಿಗೆ ಕರಗತವಾಗಿತ್ತು. ಇವೆಲ್ಲದರ ಒಟ್ಟು ಪರಿಣಾಮವೆಂದರೆ, ಅನುಭಾವದ ಭದ್ರ ಬುನಾದಿ, ಮೇರೆಯರಿಯದ ರಾಷ್ಟ್ರಪ್ರೇಮ ಹಾಗೂ ಇವುಗಳ ಒಡಲಿಂದ ಮೂಡಿಬಂದ, ದೇಶವನ್ನು ಸರ್ವಾಂಗಸುಂದರವಾಗಿ ಕಟ್ಟುವ ಮಧುರ ಹೊಂಗನಸು.

ಇದನ್ನು ನನಸಾಗಿಸುವ ನಿಟ್ಟಿನಲ್ಲಿ ಯೋಜನೆಗಳ ಮೇಘಮಾಲೆಯನ್ನು ಸ್ವಾಮೀಜಿ ಅದಾಗಲೇ ಹೊಸೆಯುತ್ತಿದ್ದರು. ಈ ದಿಸೆಯಲ್ಲಿ ಜನಜಾಗೃತಿಯ ಕೈಂಕರ್ಯವನ್ನು ಕೂಡ ಕೈಗೊಂಡರು. ಸುತ್ತಮುತ್ತಲ ಸನ್ನಿವೇಶವೂ ಸ್ವಾಮೀಜಿಯವರ ಈ ಕಾಯಕಕ್ಕೆ ಇಂಬುಕೊಡುವಂಥದ್ದೇ ಆಗಿತ್ತು. ಸ್ವಾಮಿ ದಯಾನಂದ ಸರಸ್ವತಿಯವರು ಹುಟ್ಟುಹಾಕಿದ್ದ ಆರ್ಯಸಮಾಜ, ರಾಜಾರಾಮ ಮೋಹನ ರಾಯ್ ಸ್ಥಾಪಿಸಿದ್ದ ಬ್ರಹ್ಮಸಮಾಜ (ಸ್ವಾಮೀಜಿಯವರು ಇದರ ಸದಸ್ಯರಾಗಿಯೂ ಇದ್ದರು), ಮುಂತಾದ ಸಂಘಟನೆಗಳು ಈಗಾಗಲೇ ಇದ್ದವು. ಇವುಗಳಿಗೆ ಧಾರ್ಮಿಕ ಸುಧಾರಣೆ ಪ್ರಧಾನವಾಗಿದ್ದರೂ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗಳಿಗೂ ಅವು ತೆರೆದುಕೊಂಡಿದ್ದವು. ಜೊತೆಗೆ, ಹತ್ತುಹಲವು ಮಹನೀಯರು ವೈಯಕ್ತಿಕವಾಗಿ ತಮ್ಮ ಉತ್ತಮ ನಡೆ–ನುಡಿಗಳಿಂದ, ಸಾಹಿತ್ಯಕ ಕೃಷಿಗಳಿಂದ, ಜನಸಾಮಾನ್ಯರ ಉನ್ನತಿಗಾಗಿ ಸೇವೆ ಸಲ್ಲಿಸುತ್ತಿದ್ದರು. ಕೊಲ್ಕತಾದಲ್ಲೆ, ಅಂಥ ಮಹಾನುಭಾವರಾದ ಈಶ್ವರಚಂದ್ರ ವಿದ್ಯಾಸಾಗರ್, ಬಂಕಿಮಚಂದ್ರ ಚಟರ್ಜಿ ಮುಂತಾದವರಿದ್ದರು. ಈಶ್ವರಚಂದ್ರರು ದೀನದಲಿತರ, ಬಡವರ ಬಂಧುವಾಗಿದ್ದರು. ಅವರು ಅನೇಕ ಶಾಲೆಗಳನ್ನು ತೆರೆದು, ಯಾವ ತಾರತಮ್ಯವೂ ಇಲ್ಲದೆ, ಎಲ್ಲ ವರ್ಗದ ಜನರಿಗೂ ವಿದ್ಯಾಭ್ಯಾಸ ಸಿಗುವಂತೆ ಮಾಡಿದ್ದರು. ಅದರಲ್ಲೂ ಹೆಣ್ಣುಮಕ್ಕಳಿಗೆ, ವಿಧವೆಯರಿಗೆ ಸ್ವಸಾಮರ್ಥ್ಯದಿಂದ ಬಾಳ್ವೆ ನಡೆಸುವುದಕ್ಕೆ ಪ್ರೋತ್ಸಾಹ ನೀಡುತ್ತಿದ್ದರು (ಈಶ್ವರಚಂದ್ರರು ಸ್ಥಾಪಿಸಿದ್ದ ಶಾಲೆಯೊಂದರಲ್ಲಿ ಸ್ವಾಮೀಜಿಯವರೂ ಕೆಲಕಾಲ ಶಿಕ್ಷಕರಾಗಿ ಕಾರ್ಯನಿರ್ವಹಿಸಿದ್ದರು). ಬಂಕಿಮಚಂದ್ರರು ತಮ್ಮ ರೋಚಕ ಕಾದಂಬರಿಗಳ ಮೂಲಕ, ಜನಸಾಮಾನ್ಯರಲ್ಲಿ ಓದುವ ಹುಚ್ಚನ್ನು ಹಿಡಿಸಿಬಿಟ್ಟಿದ್ದರು. ಇದರಿಂದ ಜನರಲ್ಲಿ ಸ್ವಾತಂತ್ರ್ಯದ ಕಿಡಿ ಹೊತ್ತುವಂತಾಗಿತ್ತು. ಅವರು ಬರೆದ 'ಆನಂದಮಠ' ವೆಂಬ ಕಾದಂಬರಿಯಲ್ಲಿ ಸೇರಿಸಿದ್ದ ಹಾಡಿನ ಪ್ರಾರಂಭಿಕ ನುಡಿಗಳಾದ 'ವಂದೇಮಾತರಂ' ಎಂಬುದು ಸ್ವಾತಂತ್ರ್ಯ ಮಹಾಯಜ್ಞದ ಬೀಜ ಮಂತ್ರವಾಗಿ ಹೊರಹೊಮ್ಮಿತ್ತು.

ಭಾರತದ ಇತಿಹಾಸವನ್ನು ಹದಿಹರಯದಲ್ಲಿ ಆಮೂಲಾಗ್ರವಾಗಿ ಅಧ್ಯಯನ ಮಾಡಿ, ಅರೆದು ಕುಡಿದಿದ್ದ ಸ್ವಾಮೀಜಿಯವರು, ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಕಾವು ಇರುವಾಗಲೇ ಹುಟ್ಟಿದವರಷ್ಟೇ. ಅವರು ಅಧ್ಯಾತ್ಮದ ಸಾಧನಾಪರ್ವದಲ್ಲಿದ್ದಾಗಲೂ, ತಮ್ಮ ಸುತ್ತಮುತ್ತ ನಡೆಯುತ್ತಿದ್ದ ಸಾಮಾಜಿಕ, ರಾಜಕೀಯ ಹಾಗೂ